Rehabilitation Committee

*Q.—61. Sri H. N. NANJE GOWDA (Arkalgud).—

Will the Minister for Public Works be pleased to state :—

(*a*) whether Rehabilitation Committee has been set up in connection with the construction of Hemavathy Reservoir near Gorur;

(*b*) whether it is possible to make use of the water stored in the Upper region of the dam for the benefit of the ryots in Arkalgud Taluk;

(*c*) whether compensation to the owners of the lands under submersion in connection with the Hemavathy Project would be granted in advance so as to enable the land owners to make their own arrangements early to shift to new places ?

A.—Sri VEERENDRA PATIL (Minister for Public Works).—

(*a*) No.
(*b*) No.
(*c*) No.

ಶ್ರೀ ಎಚ್. ಎನ್. ನಂಜೇಗೌಡ.—ಗೊರೂರು ಬಳಿ ಕಟ್ಟುತಕ್ಕ ಹೇಮಾವತಿ ಜಲಾಶಯ ನಂಬಂಧದಲ್ಲಿ ಈಗಾಗಲೇ ಕೆಲವು ಹಳ್ಳಿಗಳಲ್ಲಿ ಗ್ರಾಮಗಳನ್ನು ಬಿಟ್ಟು ಹೋಗುವ ಪರಿಸ್ಥಿತಿ ಇದ್ದರೂ ಕೂಡ ಇನ್ನೂ ಅಲ್ಲಿ ಪುನರ್ವಸತಿ ಸಮಿತಿ ಆಗದಿರಲು ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ಈ ಕೆಲಸ ಇತ್ತೀಚೆಗೆ ಪ್ರಾರಂಭವಾಗಿದೆ. ಯಾರೂ ಗ್ರಾಮ ವನ್ನು ಬಿಟ್ಟುಹೋಗಿಲ್ಲ. ನಾವು ಬಿಟ್ಟುಹೋಗಿ ಎಂದೂ ಹೇಳಿಲಿಲ್ಲ. ಮೊನ್ನೆ ತಾನೇ ಟೆಂಡರ್ ಕೊಟ್ಟಿದ್ದೇವೆ. ಪ್ರಿಲಿಮಿನರಿ ವರ್ಕ್ಸ್ ಆಗುತ್ತಿವೆ. ಪುನರ್ವಸತಿ ಸಮಿತಿ ಮಾಡಬೇಕೆಂದು ಸರ್ಕಾರ ತಕ್ಕ ಪರೀಕ್ಷಿಲನೆಗಳನ್ನು ತರಿಸಿದೆ. ಅದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಜಲಾಶಯದ ಹತ್ತಿರ ಇರತಕ್ಕ ಜನಗಳು ತಮ್ಮ ಜಮೀನು ಗಳನ್ನು ಉಳುಮೆಮಾಡಿ ವ್ಯವಸಾಯಮಾಡುವುದಕ್ಕೆ ತೊಂದರೆಯಾಗಿರುವುದರಿಂದ ಇದುವರೆಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಒಬ್ಬ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಸಹ ಇಲ್ಲ. ಮಂತ್ರಿಗಳು ತೊಂದರೆಯಾಗಿಲ್ಲವೆಂದು ಹೇಳ್ತಿತ್ತಾರೆ. ಕೆಲವರು ಜಮೀನನ್ನು ಮಾಡುವುದಕ್ಕೆ ಇಂಜನಿ ಯರಿಂಗ್ ಇಲಾಖೆಯವರು ಅವಕಾಶವನ್ನು ಮಾಡಿ ಕೊಡುತ್ತಾ ಇಲ್ಲ. ಆದ್ದರಿಂದ ಅವರು ಕೋರ್ಟಿಗೆ ಹೋಗಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಜನರಿಗೆ ಕಷ್ಟ ಕೊಡಬೇಕು ಎಂದು ಉದ್ದೇಶ ಇಲ್ಲ ಜನರಿಗೆ ಇನ್ನೂ ಯಾವ ರೀತಿಯಿಂದ ಪರಿಹಾರ ಕೊಡಬೇಕು, ಯಾವರೀತಿಯಿಂದ ರೀಹ್ಯಾಬಿಲಿಟೇಟ್ ಮಾಡ ಬೇಕು, ಎನ್ನುವ ಸಲುವಾಗಿ ಒಂದು ರೀಹ್ಯಾಬಿಲಿಟೇಷನ್ ಕಮಿಟಿ ಮಾಡಬೇಕು ಎಂದು ಯೋಚಿಸಿದೆ. ಅದಕ್ಕೆ ಬೇಕಾಗುವಂತಹ ಪ್ರೊಪೋಸಲ್‌ನ್ನೂ ಕೂಡ ಡಿವಿಷನಲ್ ಕಮೀಷನರಿಂದ ತರಿಸಿಕೊಂಡಿ ದ್ದೇವೆ. ಪರೀಕ್ಷಿಲನೆ ಮಾಡಿ ಆದಷ್ಟು ಬೇಗ ತೀರ್ಮಾನ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡತಕ್ಕ ಕಾಲ ದಲ್ಲಿ ಜಮೀನು ಮುಳುಗಡೆಯಾದ ಜನರಿಗೆ ಅನುಕೂಲಮಾಡುವ ವಿಷಯದಲ್ಲಿ ಸರ್ಕಾರದ ನೀತಿ ಏನು ? ಅವರು ಹಾಗೆ ತೊಂದರೆ ಪಡುವುದೇ ? ಅಥವಾ ತರಾತುರಿಯಿಂದ ಅವರಿಗೆ ಅನುಕೂಲ ಮಾಡಿಕೊಟ್ಟರೆ ತೊಂದರೆ ನಿವಾರಣೆಯಾಗುವುದಿಲ್ಲವೇ ? ಈ ಸಂಬಂಧದಲ್ಲಿ ನಿರ್ದಿಷ್ಟವಾದ ನೀತಿ ಸರ್ಕಾರದಲ್ಲಿ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಒಂದೇ ಹೊಸ ಪ್ರಾಜೆಕ್ಟ್ ಕಟ್ಟುತ್ತಾ ಇಲ್ಲ. ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟುತ್ತಾ ಇದ್ದೇವೆ. ಡಿಸ್‌ಪ್ಲೇಸ್ಡ್ ಜನರಿಗೆ ಯಾವರೀತಿ ರೀಹ್ಯಾ ಬಿಲಿಟೇಟ್ ಮಾಡಬೇಕು ಎನ್ನುವ ವಿಚಾರದಲ್ಲಿ ಸರ್ಕಾರದ ನೀತಿ ಇದೆ. ಈ ಪ್ರಕಾರ ಜನರಿಗೆ ಸೈಟು ಗಳನ್ನು ಮಾಡಿಕೊಡುತ್ತೇವೆ. ಅಪ್ರೋಚ್ ರೋಡ್ಸ್‌ಗಳನ್ನು ಮಾಡಿಕೊಡುತ್ತೇವೆ. ಎಲ್ಲೆಲ್ಲಿ ವಿಲೇಜರ್ಸ್

ನೆಲನಬೇಕು ಎಂದು ಮಾಡುತ್ತಾರೋ ಆಲ್ಲಿ ಭಾವಿಗಳನ್ನೂ ಮಾಡುತ್ತೇವೆ, ಪಂಚಾಯತಿ ಹಾರ್ಸ್, ಸ್ಕೂಲ್ ಬಿಲ್ಡಿಂಗ್ಸ್ ಮಾಡುತ್ತೇವೆ. ಮಂದಿರಗಳನ್ನೂ ಕಟ್ಟುತ್ತೇವೆ, ಇದೂ ಅಲ್ಲದೆ ಸರ್ಕಾರ ಇನ್ನೊಂದು ನೀತಿಯನ್ನು ವಿಚಾರ ಮಾಡುತ್ತಾ ಇದೆ. ಭೂಮಿಗೆ ಕಾಂಪನ್ಸೇಷನ್ ಕೊಟ್ಟು ಎಲ್ಲಿಗೋ ಹೋಗಿ ಎಂದು ಹೇಳುವುದನ್ನು ಬಿಟ್ಟು ಆ ಕಮ್ಯಾಂಡ್ ಏರಿಯಾದಲ್ಲೇ ಸರ್ಕಾರಿ ಜಮೀನು ಇದ್ದರೆ ಅಥವಾ ಜನಗಳ ಹತ್ತಿರ ಹೆಚ್ಚು ಜಮೀನು ಇದ್ದರೆ ಅದನ್ನು ತೆಗೆದುಕೊಂಡು ಆ ಭೂಮಿಯನ್ನು ಎಕ್ಸ್ ಪ್ರೊಪ್ರಿಯೇಜೆಡ್ ರೈತರಿಗೆ ಕೊಡವೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ. ಆ ರೀತಿ ಡಿಸ್‌ಪ್ಲೇಸ್ಡ್ ಜನಗಳಿಗೆ ಕಮ್ಯಾಂಡ್ ಏರಿಯಾದಲ್ಲೇ ಅನುಕೂಲ ಮಾಡಿಕೊಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಅದು ಎಷ್ಟರಮಟ್ಟಿಗೆ ಸಾಧುವಾಗಿದೆ ಎನ್ನುವ ವಿಚಾರ ಪರಿಶೀಲನೆಗಾಗಿ ರಿಹ್ಯಾಬಿಲಿ ಟೇಷನ್ ಕಮಿಟಿ ಮುಂದೆ ಬರುತ್ತದೆ.

Holenarasipur-Keralapur Road

*Q.—90. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether any representation from the local people of Holenarasipur Taluk was received by the Government requesting them to take over the maintenance of Holenarasipur-Keralapur Road by Public Works Department ;

(*b*) if so, when the first representation was received ;

(*c*) why the same was not considered ;

(*d*) whether Government would take necessary steps in this behalf ?

A.—Sri VEERENDRA PATIL (Minister for Public Works).—

(*a*) Yes.

(*b*) 19th October 1965.

(*c*) It will be considered when funds permit.

(*d*) Will be considered.

ಶ್ರೀ ಎಚ್. ಡಿ. ದೇವೇಗೌಡ.—ಈ ರಸ್ತೆಯನ್ನು ಸ್ಟೇಟ್‌ಫಂಡ್ ರಸ್ತೆಯನ್ನಾಗಿ ಕನ್‌ವರ್ಟ್ ಮಾಡಬೇಕು ಎಂದು 1965 ರಲ್ಲಿ ಮನವಿ ಬಂದಿದೆ, ಎಂದು ಹೇಳಿದ್ದೀರಿ. ಈ ರಸ್ತೆ 1954 ರಲ್ಲಿಯೇ ಪ್ರಾರಂಭವಾಗಿತ್ತು. ಸುಮಾರು 13—14 ವರ್ಷಗಳಿಂದ ಪೂರ್ತಿ ಆಗದೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೆಂದ್ರ ಪಾಟೀಲ್.—ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಎರಡು ತಾಲ್ಲೂಕುಗಳಿಗೆ ಹೋಗತಕ್ಕಂಥ ದೂರ 8 ಮೈಲಿ ಕಡಿಮೆಯಾಗುತ್ತದೆ. ಇದು ಬಹಳ ಮುಖ್ಯವಾದ ರಸ್ತೆ. 70-80 ಗ್ರಾಮಗಳಿಗೆ ಅನುಕೂಲವಾದ ರಸ್ತೆ ಇದನ್ನು ಪೂರೈಸುವುದಕ್ಕೆ ಭರವಸೆ ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಇದು 19 ಮೈಲಿಯಷ್ಟು ಉದ್ದವಾದ ರಸ್ತೆ ಇದು ಕಚ್ಚಾ ಮತ್ತು ಮಡ್ ರೋಡ್ ಆಗಿದೆ ಇದಕ್ಕೆ ಕಲ್‌ವರ್ಟ್ಸ್ ಹಾಕಬೇಕಾಗುತ್ತದೆ. ಮೆಟಲಿಂಗ್ ಮಾಡಬೇಕಾದರೆ ಖರ್ಚಾಗುತ್ತದೆ ದುಡ್ಡು ಇಲ್ಲ. ಆದ್ದರಿಂದ ನಿಧಾನ ಮಾಡಿದ್ದೇವೆ. ಮುಂದಿನ ಸೆಷರ್ಷಡೆ ಮಾಡಿ ಕೊಳ್ಳುವ ಪಟ್ಟಿ ತಯಾರಾಗುವ ಕಾಲದಲ್ಲಿ ಇದನ್ನು ಸೇರ್ಪಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್ ಡಿ. ದೇವೇಗೌಡ.—ಇದನ್ನು ಲಸ್ಟ್‌ನ್ನು ಫೈನಲೈಸ್ ಮಾಡುವಾಗ ಸೇರಿಸುತ್ತೀರೆಂದು ಭರವಸೆ ಕೊಟ್ಟಿರುತ್ತೀರಿ. ಆ ಲಸ್ಟ್ ಆಗುವುದಕ್ಕಿಂತ ಮುಂಚಿತವಾಗಿ ಈ ವರ್ಷದ ಬಡ್ಜೆಟ್‌ನಲ್ಲಿ ಅಲೋಕೇಟ್ ಮಾಡಿರುವ ರೂರಲ್ ಕಮ್ಯೂನಿಕೇಷನ್ ಗ್ರಾಂಟಿನಿಂದ ತಕ್ಷಣ ಮೆಟಲಿಂಗ್ ಮತ್ತು ಕಲ್‌ವರ್ಟ್ಸ್ ಈ ರಸ್ತೆಗೆ ಮಾಡಿಸಲು ಪ್ರಯತ್ನ ಮಾಡುತ್ತೀರಾ?